4. ಈ ರುದ್ರಭೂಮಿಗಾಗಿ ಸ್ಥಳಾವಕಾಶ ಹೊಂದಿರುವ ಗ್ರಾಮಗಳನ್ನಾಗಿ ಗುರುತಿಸಿಲ್ಲ. ಆದರೆ ಸರ್ಕಾರಿ ಜಮೀನು ಲಭ್ಯವಿದ್ದಲ್ಲಿ ಕಾಯ್ದಿರಿಸಲು ಹಾಗೂ ಲಭ್ಯವಿಲ್ಲದಿದ್ದಲ್ಲಿ ಖಾಸಗಿ ಜಮೀನನ್ನು ಖರೀದಿಸಿ ಅಥವಾ ಭೂಸ್ವಾಧೀನಪಡಿಸಿಕೊಂಡು ಸ್ಮಶಾನಕ್ಕಾಗಿ ಸೌಲಭ್ಯ ಕಲ್ಪಿಸಲು ಸರ್ಕಾರಿ ಆದೇಶ ಸಂಖ್ಯೆ: ಕಂಇ: 185 ಭೂ: ಸ್ವಾವ್ಯಾ : 92 ದಿನಾಂಕ : 20-10-95ರಲ್ಲಿ ಅವಕಾಶ ಕಲ್ಪಿಸಲಾಗಿದೆ. ಕಳೆದ ಎರಡು ಸಾಲುಗಳಲ್ಲಿ ಈ ಉದ್ದೇಶಕ್ಕೆ ರೂ. 50 ಲಕ್ಷಗಳ ಅನುದಾನವನ್ನು ಸರ್ಕಾರ ರೂಪಿಸಿತ್ತು. ಈ ವರ್ಷ ರೂ. 60 ಲಕ್ಷಗಳ ಅನುದಾನ ಇದ್ದು, ಸದ್ಯಕ್ಕೆ ರೂ. 50 ಲಕ್ಷಗಳು ಬಿಡುಗಡೆ ಆಗಿರುತ್ತದೆ.

ಖಾಲಿ ಇರುವ ಗ್ರಾಮಕರಣಿಕರ ಹುದ್ದೆ ತುಂಬುವುದು.

4207(4330) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಬೆಳ್ತಂಗಡಿ ತಾಲ್ಲೂಕಿನಲ್ಲಿ ಇರುವ ಗ್ರಾಮಕರಣಿಕರ ಹುದ್ದೆಗಳ ಸಂಖ್ಯೆ ಎಷ್ಟು ; ಅವುಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು?

2. ಸದರಿ ಹುದ್ದೆಗಳನ್ನು ಸಕಾಲದಲ್ಲಿ ತುಂಬಲು ಸರಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :—

1. ಒಟ್ಟು ಹುದ್ದೆ 45
   ಖಾಲಿ ಹುದ್ದೆ 15

2. ಮಿತವ್ಯಯ ಆದೇಶ ರೂರಲ್ ವೇಟೇಜ್ 80% ಖಾಲಿ ಹುದ್ದೆಗಳ ರದ್ದತಿ ಬಗ್ಗೆ ತೀರ್ಮಾನ ಬಾಕಿಯಿರುವುದರಿಂದ ನೇರ ನೇಮಕಾತಿಗಳನ್ನು ಸದ್ಯಕ್ಕೆ ಸ್ಥಗಿತಗೊಳಿಸಲಾಗಿದೆ. ಆದಾಗ್ಯೂ ಆಡಳಿತ ಹಿತದೃಷ್ಟಿಯಿಂದ ಹತ್ತಿರದ ವೃತ್ತಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಲೆಕ್ಕಿಗರುಗಳಿಗೆ ಹೆಚ್ಚುವರಿ ಪ್ರಭಾರದ ಮೇಲೆ ಇಟ್ಟು ಕೆಲಸಕ್ಕೆ ಧಕ್ಕೆ ಬರದಂತೆ ಖಾಲಿ ಇರುವ ಹುದ್ದೆಗಳಲ್ಲಿನ ಕೆಲಸ ನಿರ್ವಹಿಸಲಾಗುತ್ತಿದೆ.

ಬೆಳೆ ವಿಮಾ ಯೋಜನೆ.

4209(4606) ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ (ಮುಂಡರಗಿ) :— ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗದಗ ಜಿಲ್ಲೆಗೆ 1998-99ನೇ ಸಾಲಿಗೆ ರೈತರಿಗೆ ಬೆಳೆ ವಿಮಾ ಯೋಜನೆಯ ಕಂತು ಮಂಜೂರಾಗಿದೆಯೇ ತಾಲ್ಲೂಕುವಾರು ವಿವರ ನೀಡುವುದು.

ಅ) ಕೇಂದ್ರ ಸರ್ಕಾರ ಈಗಾಗಲೇ ಹಣ ಬಿಡುಗಡೆ ಮಾಡಿದ್ದು ರಾಜ್ಯ ಸರ್ಕಾರ ಸದರಿ ಹಣವನ್ನು ಬಿಡುಗಡೆ ಮಾಡಿದೆಯೆ ಮಾಡದಿದ್ದಲ್ಲಿ ಎಂದು ಬಿಡುಗಡೆ ಮಾಡಲಾಗುವುದು?

ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಸಚಿವರು) :—

ಆ) 1998-99ನೇ ಸಾಲಿಗೆ ರೈತರಿಗೆ ಬೆಳೆ ವಿಮಾ ಯೋಜನೆಯ ಕುರಿತು ಮಂಜೂರಾಗಿರುವುದಿಲ್ಲ.

ಅ) ರಾಜ್ಯ ಸರ್ಕಾರವು ಬೆಳೆ ವಿಮಾ ನಷ್ಟ ಪರಿಹಾರದ (98-99ನೇ ಸಾಲಿನ) ತನ್ನ 1: 3 ಪಾಲಿನ ಹಣವನ್ನು ಜನವರಿ -2000 ರಂದು ಭಾರತೀಯ ಸಾಮಾನ್ಯ ವಿಮಾ ನಿಗಮಕ್ಕೆ ಬಿಡುಗಡೆ ಮಾಡಲಾಗಿದೆ.

ಬೇಲೂರಿನಲ್ಲಿ ಅಂಗನವಾಡಿ ಕೇಂದ್ರಗಳ ಪ್ರಾರಂಭ.

4210(4604) ಶ್ರೀ ಎಸ್.ಹೆಚ್. ಪುಟ್ಟರಂಗನಾಥ (ಬೇಲೂರು) :— ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೇಲೂರು ಮತ ಕ್ಷೇತ್ರದಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು?

ಆ) ಬೇಲೂರು ಮತ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಅಂಗನವಾಡಿ ಕೇಂದ್ರಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಹಾಗಿದ್ದಲ್ಲಿ, ಬೇಕಾಗಿರುವ ಹೆಚ್ಚಿನ ಅಂಗನವಾಡಿ ಕೇಂದ್ರಗಳನ್ನು ತೆರೆಯಲು ಸರಕಾರ ಕೈಗೆ ಕೈಗೊಂಡ ಕ್ರಮಗಳು ಯಾವುವು ಹಾಗೂ ಎಂದಿನಿಂದ ತೆರೆಯಲಾಗುವುದು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :—

ಅ) 162

ಆ) 63 ಹೆಚ್ಚುವರಿ ಅಂಗನವಾಡಿ ಕೇಂದ್ರಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಇ) ಹೊಸದಾಗಿ ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ತೆರೆಯಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರವು ಸಂಪನ್ಮೂಲ ಕೊರತೆಯಿಂದ ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ಹಾಲಿ ಮಂಜೂರು ಮಾಡಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದೆ.